

ಪರಿಸರದ ಗುಣಮಟ್ಟದ ಸೂಚಕ. ಎಲ್ಲಿಯವರೆಗೂ ಈ ಜೀವಿಗಳನ್ನು ಅವುಗಳ ಪರಿಸರದಲ್ಲಿ ನಾವು ನೋಡಬಹುದೋ ಅಲ್ಲಿಯ ತನಕ ಈ ಪರಿಸರ ನಮಗೆ ಉತ್ತಮವಾಗಿದೆ ಎಂದೇ ಹೇಳಬಹುದು. ಈ ಎರಡನೆಯ ವಾದವನ್ನು ಮುಂದಿಟ್ಟುಕೊಂಡು, ವನ್ಯಜೀವಿ ಸಂರಕ್ಷಣೆಯ ಪ್ರಾಮುಖ್ಯತೆಯನ್ನು ತಿಳಿದುಕೊಂಡು ಅವುಗಳನ್ನು ಉಳಿಸಲು ನಡೆಸುವ ಪ್ರಯತ್ನಗಳು ಜಗತ್ತಿನಾದ್ಯಂತ ನಡೆದಿವೆ; ಭಾರತದಲ್ಲಿಯೂ ಕೂಡಾ.

ಇತಿಹಾಸವನ್ನು ಗಮನಿಸಿದಾಗ, ಕ್ರಿ.ಪೂ. 242ರಲ್ಲಿಯೇ ಚಕ್ರವರ್ತಿ ಅಶೋಕ ಪ್ರಥಮ ಬಾರಿಗೆ ಅರಣ್ಯ, ಪಕ್ಷಿಗಳು ಮತ್ತು ಪ್ರಾಣಿಗಳನ್ನು ಉಳಿಸಲು ಕಾನೂನನ್ನು ಜಾರಿಗೆ ತಂದದ್ದು ಕಂಡು ಬರುತ್ತದೆ. 1873ರಲ್ಲಿ ಮದರಾಸು ಪ್ರಾಂತ್ಯದಲ್ಲಿದ್ದ 'ಆನೆ ಸಂರಕ್ಷಣಾ ಕಾಯಿದೆ' (ಎಲಿಫೆಂಟ್ ಪ್ರಿಸರ್ವೇಷನ್ ಆ್ಯಕ್ಟ್) ಜಾರಿಗೆ ಬಂತು. 1887ರಲ್ಲಿ ಅದು ಸ್ವಲ್ಪ ಬದಲಾವಣೆಗೊಂಡು ವನ್ಯ ಪಕ್ಷಿ ಮತ್ತು ಪ್ರಾಣಿ ಸಂರಕ್ಷಣಾ ಕಾಯಿದೆ (ವೈಲ್ಡ್ ಬರ್ಡ್ಸ್ ಆ್ಯಂಡ್ ಗೇಮ್ ಪ್ರೊಟೆಕ್ಷನ್ ಆ್ಯಕ್ಟ್) ಆಗಿ ಜಾರಿಗೆ ಬಂತು. 1912 ರಲ್ಲಿ ವೈಲ್ಡ್ ಬರ್ಡ್ಸ್ ಆ್ಯಂಡ್ ಅನಿಮಲ್ ಪ್ರೊಟೆಕ್ಷನ್ ಆ್ಯಕ್ಟ್, ಆ ಮೇಲೆ 1936 ರಲ್ಲಿ ಹೇಲಿ ನ್ಯಾಷನಲ್ ಪಾರ್ಕ್ (ಇದೀಗ ಕಾರ್ಬೆಟ್ ನ್ಯಾಷನಲ್ ಪಾರ್ಕ್) ಜಾರಿಗೆ ಬಂದವು. ರಾಷ್ಟ್ರೀಯ ಉದ್ಯಾನವನಗಳು ಮತ್ತು ವನ್ಯಜೀವಿ ಧಾಮಗಳನ್ನು ಗುರುತಿಸಿ, ಘೋಷಣೆ ಮಾಡಿ. ಅದನ್ನು ವನ್ಯಜೀವಿಗಳಿಗಾಗಿ ಉಳಿಸಬೇಕು ಎಂಬ ಕಾನೂನು ಜಾರಿಗೆ ಬಂತು. 1972 ರಲ್ಲಿ ವನ್ಯಜೀವಿ ಸಂರಕ್ಷಣಾ ಕಾಯಿದೆ (ವೈಲ್ಡ್ ಲೈಫ್ ಪ್ರೊಟೆಕ್ಷನ್ ಆ್ಯಕ್ಟ್) ಜಾರಿಯಾಯಿತು. 1991ರಲ್ಲಿ ಇದಕ್ಕೆ ಸಾಕಷ್ಟು ತಿದ್ದುಪಡಿಗಳನ್ನು ಮಾಡಲಾಯಿತು.

**ಕರ್ನಾಟಕದಲ್ಲಿರುವ ಒಟ್ಟು 22,000 ಚ.ಕಿ.ಮೀ. ಅರಣ್ಯ ಪ್ರದೇಶದಲ್ಲಿ ಅರಣ್ಯದ ಹುಲಿಗಳು ವಾಸಿಸುವ ಜಾಗ 14,000 ಚ.ಕಿ.ಮೀ. ಒಟ್ಟು 12,000 ಚ.ಕಿ.ಮೀ. ಪ್ರದೇಶದಲ್ಲಿ ಗಣತಿ ಕಾರ್ಯ ನಡೆಯಿತು.**

ಹುಲಿ ದೇಶದ ಅತ್ಯಂತ ಜನಪ್ರಿಯ 'ಫೋಟೋಜೆನಿಕ್' ಮುಖವೂ ಹೌದು. 'ರಾಷ್ಟ್ರದ 18 ರಾಜ್ಯಗಳಲ್ಲಿ 3.78 ಲಕ್ಷ ಚದರ ಕಿ.ಮೀ. ಪ್ರದೇಶದಲ್ಲಿ ಒಟ್ಟು 9,735 ಕ್ಯಾಮೆರಾಗಳನ್ನು ಬಳಸಿ 1,540 ಹುಲಿಗಳ ಚಿತ್ರಗಳನ್ನು ತೆಗೆಯಲಾಗಿದೆ' ಎಂದು 2014ರ ಗಣತಿಯ ವರದಿ ಹೇಳುತ್ತಿದೆ. ಅದರ ಪ್ರಕಾರ ಪಶ್ಚಿಮ ಘಟ್ಟದ, ನೀಲಗಿರಿ ಅಭಯಾರಣ್ಯದ ಭಾಗವಾಗಿರುವ ಬಂಡೀಪುರ, ನಾಗರಹೊಳೆ, ಮಧುಮಲೈ ಹಾಗೂ ವೈನಾಡು ಭಾಗದಲ್ಲಿ ಹುಲಿಗಳ ಒಟ್ಟು ಸಂಖ್ಯೆ 776. ಕರ್ನಾಟಕದ ಭಾಗದಲ್ಲಿ 406, ಕೇರಳದಲ್ಲಿ 136, ತಮಿಳುನಾಡಿನಲ್ಲಿ 229 ಹಾಗೂ ಗೋವಾದಲ್ಲಿ 5 ಹುಲಿಗಳು ಪತ್ತೆಯಾಗಿವೆ. ಈ ಅಂಕೆ ಸಂಖ್ಯೆಗಳು ಹುಲಿ ಸಂರಕ್ಷಣೆಯ ಯಶಸ್ಸನ್ನು ಸಾರುತ್ತವೆಯಾದರೂ, ಅದಷ್ಟೇ ಅಲ್ಲ!

ಉದಾಹರಣೆಗೆ ನಾವು ಕರ್ನಾಟಕವನ್ನೇ ತೆಗೆದುಕೊಂಡು ಈ ವಿಷಯವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸೋಣ. ಕರ್ನಾಟಕದಲ್ಲಿ 'ಹುಲಿ ಸಂರಕ್ಷಣಾ ಯೋಜನೆ' 1998 ರಲ್ಲಿ ಪ್ರಾರಂಭವಾಯಿತು. ರಾಜ್ಯದ ಪ್ರಮುಖ ಹುಲಿಯ ನೆಲೆಗಳಾದ ನಾಗರಹೊಳೆ, ಭದ್ರಾ, ಬಂಡೀಪುರ ಮತ್ತು ಕುದುರೆ ಮುಖಗಳಲ್ಲಿ ಈ ಯೋಜನೆಯ ಅಡಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಇದಕ್ಕಾಗಿ ಸರ್ಕಾರೇತರ ಸಂಘಟನೆಗಳೂ ಕೈ ಜೋಡಿಸಿದವು. ನಿಷ್ಠಾವಂತ ಅರಣ್ಯಾಧಿಕಾರಿಗಳೂ, ಸಂರಕ್ಷಣೆಯ ಪ್ರಜ್ಞೆಯುಳ್ಳ ಇತರರೂ ಒಂದಾಗಿ ಮಾಡಿದ ಕೆಲಸ ಇಂದು ಹೆಚ್ಚಾದ 'ಹುಲಿ ಸಂಖ್ಯೆ'ಯ ರೂಪದಲ್ಲಿ ಫಲ ಕೊಟ್ಟಿದೆ.

ಆದರೆ ಸಂಖ್ಯೆ ಹೆಚ್ಚಾಯಿತು ಎಂದೀಗ ನಾವು ಕೈ ಕಟ್ಟಿ ಕುಳಿತುಕೊಳ್ಳುವಂತಿಲ್ಲ. ಅದರೊಂದಿಗೆ ಅವುಗಳನ್ನು ಉಳಿಸಿಕೊಳ್ಳುವ ಮತ್ತು ಸಂತತಿಯನ್ನು ಬೆಳಸಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದೆ. ಹುಲಿಗಳು ಹೆಚ್ಚಾಗಿವೆ ಎನ್ನುವುದು ತಿಳಿದದ್ದಾದರೂ ಹೇಗೆ? ಎಂಬ ಪ್ರಶ್ನೆಗೆ ಗಣತಿಯಿಂದ,



ಚಿತ್ರ: ಎಚ್.ಸತೀಶ್